**ಸಿ. ಸಿ. ನಂ. 4408/2023**

**ಪಿ ಡಬ್ಲ್ಯೂಃ 1**

**ಸಾಕ್ಷಿಯು ದಿನಾಂಕಃ** 05-08-2025 **ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ಆರೋಪಿ ಪರ ಶ್ರೀ ಎಸ್ ಕೆ ಡಿ ಆರ್., ವಕೀಲರಿಂದ**

ಆರೋಪಿಗೆ ಆಭರಣಗಳನ್ನು ಮಾರುವಾಗ ನನ್ನ ತಂದೆ ತಾಯಿಯೊಂದಿಗೆ ಕ್ರೆಡಿಟ್ ಆಧಾರದ ಮೇಲೆ ಮಾರಾಟ ಮಾಡಲು ಚರ್ಚೆ ಮಾಡಿದ್ದೆ. ಕ್ರೆಡಿಟ್ ನೋಟ್ ಹೊರತುಪಡಿಸಿ ಆರೋಪಿ ಕಡೆಯಿಂದ ಅವರು ಸಹಿ ಮಾಡಿದ್ದ ಬೇರೆ ಯಾವುದೇ ದಾಖಲೆಯನ್ನು ಪಡೆದಿರುವುದಿಲ್ಲ.

ಈ ವ್ಯವಹಾರಕ್ಕೂ ಮೊದಲು ನನ್ನ ತಂದೆ ಅಂಗಡಿ ನಡೆಸುತ್ತಿದ್ದಾಗ ಆರೋಪಿಯೊಂದಿಗೆ ವ್ಯವಹಾರ ಮಾಡಿ ಅದಕ್ಕೆ ಸಂಬಂಧಿಸಿ ದಿಃ **08-11-2020** ರಂದು ಇನ್ ವಾಯಸ್ ಸಂಖ್ಯೆಃ **556, 557** ಮತ್ತು **558** ಗಳನ್ನು ಬರೆಯಲಾಗಿತ್ತು ಅಂದರೆ ಸರಿಯಲ್ಲ. ಆರೋಪಿ ಇನ್ ವಾಯಸ್ ಸಂಖ್ಯೆಃ **556** ಕ್ಕೆ ಸಂಬಂಧಿಸಿ ಬಿ ಡಿ ಸಿ ಸಿ ಬ್ಯಾಂಕ್ ನ ರೂ. **40** ಲಕ್ಷಗಳ ಚೆಕ್ ನ್ನು ದಿಃ **09-11-2020** ನಮೂದಿಸಿ ಕೊಟ್ಟಿದ್ದರು ಅಂದರೆ ಸರಿಯಲ್ಲ. ಸದರಿ ಚೆಕ್ ಸಂಖ್ಯೆಃ **097375** ಆಗಿರುತ್ತದೆ ಅಂದರೆ ಸರಿಯಲ್ಲ. ಇನ್ ವಾಯಸ್ ಸಂಖ್ಯೆಃ **557** ಕ್ಕೆ ಸಂಬಂಧಿಸಿ ದಿಃ **09-11-2020** ನಮೂದಿಸಿ ಚೆಕ್ ಸಂಖ್ಯೆಃ **097376** ನ್ನು ರೂ. **30** ಲಕ್ಷ ಗಳಿಗೆ ಕೊಟ್ಟಿದ್ದರು ಅಂದರೆ ಸರಿಯಲ್ಲ. ಅದೇ ದಿನ ಇನ್ ವಾಯಸ್ ಸಂಖ್ಯೆಃ **558** ಕ್ಕೆ ಸಂಬಂಧಿಸಿ ರೂ. **21,25,793/-** ಗಳ ವ್ಯವಹಾರ ಆಗಿತ್ತು ಅಂದರೆ ಸರಿಯಲ್ಲ. ಸದರಿ ಮೇಲೆ ಹೇಳಿದ ಚೆಕ್ ಗಳು ಹಿಂತಿರುಗಿದ್ದರಿಂದ, ಆರೋಪಿ ನಗದು ರೂಪದಲ್ಲಿಯೇ ಹಣ ಪಾವತಿ ಮಾಡಿದ್ದರಿಂದ ಅವರು ನೀಡಿದ್ದ ಚೆಕ್ ಗಳನ್ನು ಅವರಿಗೆ ಹಿಂತಿರುಗಿಸಿರುತ್ತೇವೆ ಅಂದರೆ ಸರಿಯಲ್ಲ.

ಉಳಿದ ರೂ. **21,25,793/-** ಗಳು ಮತ್ತು ಬೇರೆ ವ್ಯವಹಾರದ ಹಣ ಒಟ್ಟಾಗಿ ಸೇರಿಸಿ ರೂ. **52,00,000/-** ಗಳಿಗೆ ಆರೋಪಿ ನನ್ನ ತಂದೆಯ ಹೆಸರಿಗೆ ಚೆಕ್ ನೀಡಿದ್ದರು ಅಂದರೆ ಸರಿಯಲ್ಲ. ಸದರಿ ಚೆಕ್ ಅಮಾನ್ಯ ಆಗಿದ್ದರಿಂದ ಸದರಿ ಹಣವನ್ನು ನಗದು ರೂಪದಲ್ಲಿಯೇ ಆರೋಪಿ ಪಾವತಿಸಿದ ನಂತರ ಆ ಚೆಕ್ ನ್ನು ನನ್ನ ತಂದೆ ಹಿಂತಿರುಗಿಸಿದ್ದರು ಅಂದರೆ ಸರಿಯಲ್ಲ. ಸದರಿ ವ್ಯವಹಾರಕ್ಕೆ ಸಂಬಂಧಿಸಿ ಆರೋಪಿ ನನ್ನ ತಂದೆಗೆ ನೀಡಿದ್ದ ಚೆಕ್ ವೊಂದನ್ನು ನಾನು ದುರುಪಯೋಗಪಡಿಸಿಕೊಂಡು ನನಗೆ ಬೇಕಾದ ಆಗೇ ತುಂಬಿ ಈ ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಪ್ರಕರಣದಲ್ಲಿನ ಚೆಕ್ ನಲ್ಲಿರುವ ಮೊತ್ತದ ಹಣವನ್ನು ಪಾವತಿಸಲು ಆರೋಪಿ ಭಾದ್ಯಸ್ಥನಿರುವುದಿಲ್ಲ ಅಂದರೆ ಸರಿಯಲ್ಲ. ಆರೋಪಿ ನನ್ನ ತಂದೆಯೊಂದಿಗೆ ಮೇಲೆ ಹೇಳಿದ ದಿನದಂದು ಮಾಡಿದ ವ್ಯವಹಾರವನ್ನು ಹೊರತುಪಡಿಸಿ ನಾನು ಹೇಳಿದಂತೆ ನನ್ನೊಂದಿಗೆ ಯಾವುದೇ ವ್ಯವಹಾರವನ್ನು ಮಾಡಿರುವುದಿಲ್ಲ ಅಂದರೆ ಸರಿಯಲ್ಲ.

ಆರೋಪಿ ಕಡೆಯಿಂದ ನಿಪಿಃ **1** ರ ಚೆಕ್ ನ್ನು ವ್ಯವಹಾರಕ್ಕೆ ಸಂಬಂಧಿಸಿ ಕೊಡುತ್ತಿದ್ದೇನೆ ಎಂದು ಲಿಖಿತ ಪತ್ರವನ್ನು ಅಥವಾ ದಾಖಲೆಯನ್ನು ಬರೆಸಿಕೊಂಡಿಲ್ಲ. ನಿಪಿಃ **6** ರಲ್ಲಿ ಚೆಕ್ ಮುಖಾಂತರ ವ್ಯವಹಾರ ಆಗಿದೆ ಎಂದು ಬರೆದಿಲ್ಲ ಅಂದರೆ ಸಾಕ್ಷಿ ಉಲ್ಲೇಖದಲ್ಲಿರುವ ವ್ಯವಹಾರದ ಮಾಹಿತಿಯಲ್ಲಿ ಆ ಬಗ್ಗೆ ಮಾಹಿತಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಉಲ್ಲೇಖಿತ ದಾಖಲೆ ನನ್ನ ಬಳಿ ಇರುತ್ತದೆ ಅಂದರೆ ಸರಿ. ಸದರಿ ಉಲ್ಲೇಖಿತ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ಹಾಜರುಪಡಿಸಬಲ್ಲೆ ಎಂದು ನುಡಿಯುತ್ತಾರೆ.

ಆಭರಣಗಳನ್ನು ಆರೋಪಿಗೆ  ನೀಡಲಾಗಿದೆ ಎಂದು ನಿಪಿಃ 6 ರಲ್ಲಿ ನಮೂದು ಇರುವುದಿಲ್ಲ ಅಂದರೆ ಸರಿ. ಸಾಕ್ಷಿ ಪುನಃ ಮುಂದುವರೆದು ಉಲ್ಲೇಖಿತ ದಾಖಲೆಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ.

ಆರೋಪಿಗೆ ಯಾವ ಯಾವ ಆಭರಣಗಳನ್ನು ನೀಡಲಾಗಿತ್ತು ಎಂದು ಲಿಖಿತವಾಗಿ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ಆರೋಪಿಯೇ ಆಭರಣಗಳನ್ನು ನಮ್ಮಿಂದ ಉತ್ತಮ ಸ್ಥಿತಿಯಲ್ಲಿ ಪಡೆದಿರುವುದಾಗಿ ನಿಪಿಃ 6 ರಲ್ಲಿ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಇನ್ ವಾಯಸ್ ನ ಇನ್ನೊಂದು ಪ್ರತಿ ಆರೋಪಿಗೆ ಕೊಟ್ಟಿರುತ್ತೇನೆ. ಇನ್ ವಾಯಸ್ ನಲ್ಲಿ ನನ್ನ ಮತ್ತು ಆರೋಪಿಯ ಸಹಿ ಇರುತ್ತವೆಯಾ ಎಂಬ ಪ್ರಶ್ನೆಗೆ ಸಾಕ್ಷಿ ಮಾಲೀಕರ ಸಹಿ ಮತ್ತು ಆರೋಪಿಯ ಸಹಿ ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ನನ್ನ ತಾಯಿಯ ಸಹಿ ಇರುತ್ತದೆ. ಉಲ್ಲೇಖಿತ ದಾಖಲೆಗಳಲ್ಲಿ ನನ್ನ ತಾಯಿಯ ಸಹಿಗಳೇ ಇರುತ್ತವೆ. ನಿಪಿಃ 6 ರ ಇನ್ ವಾಯಸ್ ತಯಾರಾದಾಗಲೇ ಚೆಕ್ ನೀಡಿದ್ದಲ್ಲಿ, ನಿಪಿಃ 6 ರಲ್ಲಿ ಸದರಿ ಚೆಕ್ ನೀಡಿದ ಬಗ್ಗೆ ಮತ್ತು ಅದರಲ್ಲಿರುವ ಅಂಶಗಳ  ಬಗ್ಗೆ ನಮೂದಾಗುತ್ತಿತ್ತು, ನಿಪಿಃ 6 ನ್ನು ಸೃಷ್ಟಿಸಿರುವುದರಿಂದ ಸದರಿ ಅಂಶ ನಮೂದು ಆಗಿಲ್ಲ ಅಂದರೆ ಸರಿಯಲ್ಲ. ಪ್ರಕರಣದಲ್ಲಿನ ಚೆಕ್ ನ್ನು ಇನ್ ವಾಯಸ್ ನಲ್ಲಿ ಕಾಣಿಸಿರುವ ವ್ಯವಹಾರದ ದಿನದಂದು ಕೊಟ್ಟಿರುವುದಿಲ್ಲ ಮತ್ತು ಈ ಹಿಂದೆ ನನ್ನ ತಂದೆಯೊಂದಿಗೆ ಮಾಡಿದ ವ್ಯವಹಾರದ ದಿನದಂದು ಕೊಡಲಾಗಿತ್ತು ಅಂದರೆ ಸರಿಯಲ್ಲ. ನನ್ನ ತಾಯಿಗೆ ಪ್ರಕರಣದಲ್ಲಿನ ವ್ಯವಹಾರಕ್ಕೆ ಸಂಬಂಧಿಸಿ ಮಾಹಿತಿ ಇರುತ್ತದೆ. ನನ್ನ ತಾಯಿಗೆ ಪ್ರತಿದಿನ ಆಗುವ ವ್ಯವಹಾರದ ಬಗ್ಗೆ ನಿಖರವಾಗಿ ಮಾಹಿತಿ ಇರುವುದಿಲ್ಲ.

ಮೇಲೆ ಹೇಳಿದ ರೂ. 40 ಲಕ್ಷ, 30 ಲಕ್ಷ ಮತ್ತು 52 ಲಕ್ಷಗಳಿಗೆ ಸಂಬಂಧಿಸಿ ಆರೋಪಿ ನೀಡಿದ್ದ ಮತ್ತು ನಗದು ಹಣ ಪಾವತಿ ಮಾಡಿ ವಾಪಸ್ ಪಡೆದಿದ್ದ ಚೆಕ್ ಗಳನ್ನು ಆರೋಪಿ ಇನ್ನೊಂದು ಕ್ರಿಮಿನಲ್ ಪ್ರರಕಣದಲ್ಲಿ ಬಾಗಿಯಾಗಿದ್ದಾರೆ ಎಂದು ಪೋಲಿಸರು ಜಪ್ತು ಪಡಿಸಿಕೊಂಡಿರುತ್ತಾರೆ ಅಂದರೆ ಸರಿಯಲ್ಲ. ನಮ್ಮ ಅಂಗಡಿಯಲ್ಲಿ ಆದ ವ್ಯವಹಾರಗಳ ಇನ್ ವಾಯಸ್ ಗಳು ಅಂಗಡಿಯಲ್ಲಿ ಇರುತ್ತವೆ ಅಂದರೆ ಸರಿ.

ಆರೋಪಿ ಬೇರೊಂದು ಪ್ರಕರಣದಲ್ಲಿ ಜೈಲಿಗೆ ಹೋಗಿದ್ದರು ಅಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಆರೋಪಿ ಪರ ವಕೀಲರು ಸಮಯ ಕೋರಿರುತ್ತಾರೆ. ಈಗಾಗಲೇ ಸಾಕ್ಷಿಯನ್ನು ಮೂರು ಬಾರಿ ಪಾಟೀ ಸವಾಲು ಮಾಡಿರುವುದರಿಂದ ಮತ್ತು ಈ ದಿನ ಸಲ್ಲಿಸಿದ ಅರ್ಜಿಯ ವಿಚಾರಣೆ ಆಗುವವರೆಗೆ ಪಾಟೀ ಸವಾಲು ಮಾಡಲು ಆಗುವುದಿಲ್ಲ ಎಂಬ ಕಾರಣ ಸಕಾರಣವಲ್ಲದ್ದರಿಂದ ಕೋರಿಕೆಯನ್ನು ತಳ್ಳಿ ಹಾಕಿ ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ: ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.